## 1

'ಹಾಯ್, ಆಯ್ ಆಮ್ ಮೋ... ಗುರುತಾಯ್ತಾ?...'

ಎನ್ನುತ್ತಾ ಆರಡಿ ಎತ್ತರದ ಸ್ಫುರದ್ರೂಪಿ ಆಧುನಿಕ ವೇಷದ ವ್ಯಕ್ತಿಯೊಬ್ಬ ಮುಂಬಯಿನ ಪ್ರದರ್ಶನ ಮಳಿಗೆಯಲ್ಲಿ ಅಚಾನಕ್ಕಾಗಿ ಹಸ್ತಲಾಘವಕ್ಕಾಗಿ ನನ್ನೆದುರು ಬಂದು ನಿಂತು ಕೈ ಒಡ್ಡಿದ. ನೀಟಾಗಿ ಟ್ರಿಮ್ ಮಾಡಿದ ಫ್ರೆಂಚ್ ದಾಡಿ, ತುಸು ಉದ್ದವೇ ಎನ್ನಿಸುವ ಸೈಡ್‌ಬರ್ನ್‌ಗಳು, 'ಪರ್ಫೆಕ್ಟ್' ಎನ್ನಿಸುವ ಫಾರ್ಮಲ್ ದಿರಿಸು... ಇವನ್ಯಾರೆಂದು ಗುರುತಾಗದೆ, ಮುಂದೊದಗಬಹುದಾದ ಮುಜುಗರಗಳಿಂದ ತಪ್ಪಿಸಿಕೊಳ್ಳಲು ಹೆಣಗುತ್ತಿದ್ದಂತೆ, ಅಂಥ ಸಂದಿಗ್ಧಕ್ಕೇನೂ ನನ್ನನ್ನು ತಳ್ಳದೆ 'ನಿನಗೆ ಗುರುತಾಗಿರಲಿಕ್ಕಿಲ್ಲ ಬಿಡು' ಎಂದು ಆತನೇ ಮಾತು ಮುಂದುವರೆಸಿದ.

ಆತ ಮೋಹನಕುಮಾರ. ಊರಿನಲ್ಲಿ ಹೈಸ್ಕೂಲಿನಲ್ಲಿ ಒಟ್ಟಿಗೇ ಓದಿದ್ದೆವು. ಎಸ್ಸೆಸ್ಸೆಲ್ಸಿ ಆದಮೇಲೆ ಅವನೆಲ್ಲೋ, ನಾನೆಲ್ಲೋ. ನಂತರ ಸಿಕ್ಕಿದ್ದು ಈಗಲೇ, ಅದೂ ಮುಂಬಯಿಯಲ್ಲಿ. ನಿಜ ಹೇಳಬೇಕೆಂದರೆ ಈ ಮೋಹನಕುಮಾರನ ನೆನಪು ನನಗೆ ಅಷ್ಟೇನೂ ಇರಲಿಲ್ಲ. ಅದನ್ನು ನೆನಪಿಸಿಕೊಡಲು ಆತನೇ ಸುಮಾರು ಕಷ್ಟಪಡಬೇಕಾಯಿತು. ಊರಲ್ಲಿ ಪೋಸ್ಟ್‌ಆಫೀಸಿನ ಎದುರೇ ಈತನ ಮನೆಯಿತ್ತು. ಪಕ್ಕದಲ್ಲೇ ಒಂದು ಹಾರ್ಡ್‌ವೇರ್ ಶಾಪು... ಇತ್ಯಾದಿ.

ಅದೆಲ್ಲ ಇರಲಿ, ಈ ಮೋಹನಕುಮಾರ ಎನ್ನುವ ಹೆಸರು 'ಮೋ' ಎನ್ನುವ ಚೈನೀಸ್ ಹೆಸರಿನಂತೆ ಏಕಾಯಿತೆಂದು ಕೇಳಿದ್ದಕ್ಕೆ ಆತ ಸುದೀರ್ಘ ಸ್ಪಷ್ಟನೆ ನೀಡಿದ್ದ. ಏನೇನೋ ಸಿಕ್ಕಾಪಟ್ಟೆ ಓದಿ ನಂತರ ಜರ್ಮನಿಯಲ್ಲಿ ಅದೆಂತದೋ ಹೈಯರ್ ಸ್ಟಡೀ ಮಾಡಿ ಈಗ ಜಗತ್ತಿನ ಅತಿ ಪ್ರಖ್ಯಾತ ಅಟೋಮೋಬೈಲ್ ಕಂಪೆನಿಯೊಂದರಲ್ಲಿ ಉನ್ನತ ಹುದ್ದೆಯಲ್ಲಿದ್ದಾನೆ. ಆ ಕಂಪೆನಿಯ ಮುಖ್ಯ ಕಚೇರಿ ಸ್ಪೇನ್‌ನಲ್ಲಿದೆ. ಈತ ಸ್ಪೇನ್, ಥಾಯ್ಲೆಂಡ್, ಭಾರತ ಸೇರಿದಂತೆ ಏಷ್ಯಾದ ಮುಖ್ಯದೇಶಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾನೆ. ಹೆಚ್ಚಿನ ಸಮಯ ಆತ ವಿದೇಶದಲ್ಲೇ ಕಳೆಯುವುದರಿಂದ ಅವರೊಂದಿಗೇ ಸಂಹವನ ಹೆಚ್ಚು. ಅವರಿಗೆಲ್ಲ ಮೋಹನ ಕುಮಾರ ಎಂಬ ಉದ್ದದ ಹೆಸರು ಬಳಕೆಗೆ ಕಷ್ಟವಾಗುತ್ತದೆಂದು ತಾನೇ ಅದನ್ನು ಮೊಟಕುಗೊಳಿಸಿದ್ದಾನೆ. ಅದು ಸ್ಟೈಲಿಷ್ ಆಗಿಯೂ ಇದೆ ಎಂಬುದು ಆತನಿಗೆ ಖುಷಿಯ ಸಂಗತಿ.

'ಈ ಎಕ್ಸಿಬಿಷನ್ನಿಗೆ ನಮ್ಮ ಕಂಪೆನಿಯೇ ಅಫೀಶಿಯಲ್ ಸ್ಪಾನ್ಸರ್' ಎಂದ ಆತ.

'ಓ, ಹೌದಾ? ನಾನು ಬೆಂಗಳೂರಿನ ಯುನೈಟೆಡ್ ಆಟೋಗೇರ್ ಎನ್ನುವ ಕಂಪೆನಿಯಲ್ಲಿ ಅಸಿಸ್ಟೆಂಟ್ ಮ್ಯಾನೇಜರ್. ಗೊತ್ತಲ್ಲಾ ನಮ್ಮ ಕೆಲಸ; ನಮಗೆ ಇಂಥವೆಲ್ಲಾ ಬೇಕು' ನಾನೆಂದೆ. ನಿಜ ಹೇಳಬೇಕೆಂದರೆ ಇಂಥ ಹೊರ ಊರಿನ ಪ್ರದರ್ಶನಗಳಿಗೆ ನನ್ನ ಬಾಸೇ ಹೋಗುವುದು. ಆತನಿಗೇನೋ ಪರ್ಸನಲ್ ಕೆಲಸ ಇದ್ದುದಕ್ಕಾಗಿ ನನ್ನನ್ನು ಕಳಿಸಿದ್ದಾನೆ. ಇದನ್ನೆಲ್ಲಾ ಇವನಿಗ್ಯಾಕೆ ಹೇಳುವುದೆಂದು ಸುಮ್ಮನಾದೆ.

'ವೋವ್... ಆಸ್ಸಮ್! ನೀನು ಒಂದು ರೀತಿಯಲ್ಲಿ ನನ್ನ **Client** ಅಂದಹಾಗಾಯಿತು. ವದ್ದಾss...' ಎನ್ನುತ್ತ ಗಹಗಹಿಸಿ ನಕ್ಕು ಜೋರಾಗಿ ನನ್ನ ಕೈ ನೋಯುವಂತೆ ಕುಲುಕಿದ. ಒಂದು ಕ್ಷಣಕ್ಕೆ ನನ್ನನ್ನೇ ವದ್ದಾ ಎಂದು ಕರೆಯುತ್ತಿದ್ದಾನೋ ಎನ್ನಿಸಿ ಕಸಿವಿಸಿಯಾಯಿತಾದರೂ, ಯಾವುದಾದರೂ ಹೊಸ ಇಂಗ್ಲೀಷಿನ ಸ್ಲ್ಯಾಂಗ್ ಇದ್ದರೂ ಇರಬಹುದೆಂದು ಸುಮ್ಮನಾದೆ.

'ವೆಲ್, ಹವ್ ಅಬೌಟ್ ಸಮ್ ಕಾಫೀ?' ಎಂದ. ನಾನು ಎರಡೂ ಭುಜವನ್ನೆತ್ತಿ 'ಓಕೆ' ಅಂದೊಡನೆ ಮತ್ತೆ 'ವದ್ದಾss...' ಎಂದ.